ರಾಜಾಜಿನಗರದ ಐದನೇ ಬ್ಲಾಕ್‌ನ ಜೇಡರಹಳ್ಳಿಯ ದೇವಸ್ಥಾನದಲ್ಲಿ ಸರಕಾರಿ ಶಾಲೆ ನಡೆಯುತ್ತಿರುವ ಬಗ್ಗೆ.

೧೬೫೫. ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ರಾಜಾಜಿನಗರದ ೫ನೇ ಬ್ಲಾಕಿನ ಜೇಡರಹಳ್ಳಿಯ ದೇವಸ್ಥಾನದಲ್ಲಿ ಮತ್ತು ಹೊರಗೆ ಸರ್ಕಾರಿ ಪ್ರಾಥಮಿಕ ಶಾಲೆ ನಡೆಯುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ?

(ಆ) ವಿದ್ಯಾರ್ಥಿಗಳು ತೀರಾ ತೊಂದರೆಗೊಳಪಟ್ಟಿರುವುದರಿಂದ ಹತ್ತಿರದಲ್ಲಿರುವ ನಾಗರೀಕ ಸೌಲಭ್ಯಗಳ ನಿವೇಶನವೊಂದರಲ್ಲಿ ಸರ್ಕಾರದವರೇ ಶಾಲೆಯನ್ನು ಕಟ್ಟಿಸಿಕೊಟ್ಟು ವಿದ್ಯಾರ್ಜನೆ ಮಾಡಲು ಅವಕಾಶ ಮಾಡಿಕೊಡಲಾಗುವುದೆ ?

ಶ್ರೀ ಎಂ. ರಘುಪತಿ (ಶಿಕ್ಷಣ ಮಂತ್ರಿಗಳು).—

(ಅ) ಬಂದಿದೆ.

(ಆ) ನಿವೇಶನ ಪಡೆಯಲು ಕ್ರಮ ಕೈಗೊಂಡು ನಂತರ ಶಾಲಾ ಕಟ್ಟಡ ಕಟ್ಟಲು ಪರಿಶೀಲಿಸಲಾಗುವುದು.

ಧಾರವಾಡದಲ್ಲಿನ ಸರಕಾರಿ ಮುದ್ರಣಾಲಯದ ಬಗ್ಗೆ

೧೬೧೪. ಶ್ರೀ ಜಿ. ಚಂದ್ರಕಾಂತ ಬೆಲ್ಲದ (ಧಾರವಾಡ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

(ಅ) ಧಾರವಾಡದಲ್ಲಿ ಸರ್ಕಾರಿ ಮುದ್ರಣಾಲಯ ಸರಿಯಾಗಿ ನಡೆಯುತ್ತಿದೆಯೆ, ಹಾಗಿಲ್ಲದಿದ್ದಲ್ಲಿ ಇದಕ್ಕೆ ಕಾರಣಗಳೇನು ?

(ಆ) ಈ ಮುದ್ರಣಾಲಯ ಸುಸಜ್ಜಿತ ಯಂತ್ರೋಪಕರಣಗಳನ್ನು ಅಳವಡಿಸುವುದಕ್ಕೆ ಸರ್ಕಾರದವರು ಏನಾದರೂ ಕ್ರಮ ತೆಗೆದುಕೊಂಡಿದ್ದಾರೆಯೆ, ಹಾಗೂ ಕೆಲಸಗಾರರ ಸಂಖ್ಯೆ ಹೆಚ್ಚಿಸುವುದು ಅವಶ್ಯಕತೆ ಇದೆಯೆ, ಇದರ ಉಪಯುಕ್ತತೆ ಹೆಚ್ಚಿಸಲು ಸರ್ಕಾರದವರು ತೆಗೆದುಕೊಂಡ ಕ್ರಮಗಳೇನು ?

ಶ್ರೀ ಎಂ. ರಘುಪತಿ (ಶಿಕ್ಷಣ ಮಂತ್ರಿಗಳು).—

(ಅ) ಸರಿಯಾಗಿ ನಡೆಯುತ್ತಿದೆ.

(ಆ) ಮುದ್ರಣಾಲಯಗಳ ಆಧುನಿಕತೆ ವಿಷಯ ಪರಿಶೀಲಿಸಲು ಸರ್ಕಾರ ತಜ್ಞರ ಸಮಿತಿ ಯೊಂದನ್ನೂ ನೇಮಿಸಿತ್ತು. ಸಮಿತಿ ತನ್ನ ವರದಿ ಸಲ್ಲಿಸಿದೆ, ಸಮಿತಿಯ ಶಿಫಾರಸ್ಸಿನ ಮೇರೆಗೆ ಧಾರವಾಡ ಮುದ್ರಣಾಲಯವೂ ಸೇರಿ ಎಲ್ಲಾ ಸರ್ಕಾರಿ ಮುದ್ರಣಾಲಯಗಳ ಆಧುನೀಕರಣದ ವಿಷಯ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

ರಾಜ್ಯದಲ್ಲಿ ಏಕೋಪಾಧ್ಯಾಯ ಶಾಲೆಗಳಿಗೆ ಇನ್ನೋರ್ವ ಉಪಾಧ್ಯಾಯರನ್ನು ನೇಮಿಸುವ ಬಗ್ಗೆ

೧೪೮೩. ಶ್ರೀ ರಮಾನಾಥ ರೈ (ಬಂಟವಾಳ).—ಮಾನ್ಯ ಪ್ರಾಥಮಿಕ ಹಾಗೂ ವಯಸ್ಕರ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ತಿಳಿಸುವರೇ ?

(ಅ) ರಾಜ್ಯದಲ್ಲಿ ಏಕೋಪಾಧ್ಯಾಯ ಶಾಲೆಗಳಿಗೆ ಇನ್ನೋರ್ವ ಉಪಾಧ್ಯಾಯರನು ನೇಮಿಸಲಾಗುವುದೆಂಬುದು ನಿಜವೇ ?

(ಆ) ಹಾಗಿದ್ದಲ್ಲಿ ಈವರೆಗೆ ಎಷ್ಟು ಶಾಲೆಗಳಿಗೆ ಉಪಾಧ್ಯಾಯರನ್ನು ನೇಮಿಸಲಾಗಿದೆ ?

(ಇ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಷ್ಟು ಏಕೋಪಾಧ್ಯಾಯ ಶಾಲೆಗಳಿವೆ ಹಾಗೂ ಆ ಪೈಕಿ ಎಷ್ಟು ಶಾಲೆಗಳಿಗೆ ಇನ್ನೋರ್ವ ಅಧ್ಯಾಪಕರನ್ನು ನೇಮಿಸಿಲಾಗಿದೆ ?